## ಪ್ರ. ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ.

## ಸಿ.ಸಿ .ಸಂಖ್ಯೆ ::249/2019

**ಸಾಕ್ಷಿದಾರರ ಹೆಸರು** : ಮುಸ್ತಫ **DW-1**

**ತಂದೆಯ ಹೆಸರು** : ಹಸನ್ ಕಾಕಾ

**ವಯಸ್ಸು** : 50 ವರ್ಷ

**ಉದ್ಯೋಗ** : ಕೂಲಿ

**ವಾಸಸ್ಥಳ** : ಬಸವಬನಹಳ್ಳಿ

**ದಿನಾಂಕಃ28-02-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಆರೋಪಿಯ ಪರ ಶ್ರೀ. ARK ವಕೀಲರಿಂದ ::**

ನನಗೆ ಪಿರ್ಯಾದುದಾರರು ಪರಿಚಯ ಇದ್ದು ಅವರು ನಮ್ಮ ಪಕ್ಕದ ಗ್ರಾಮದವರಾಗಿರುತ್ತಾರೆ. ನನ್ನ ಮತ್ತು ಪಿರ್ಯಾದುದಾರರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ. ನಾನು ನನ್ನ ಕೆಲಸದ ಬಾಬ್ತು ಬೇರೆಕಡೆ ಹೋಗುವ ಕಾರಣದಿಂದ ಸಾಮಾನ್ಯವಾಗಿ ನನ್ನ ಮನೆಯಲ್ಲಿ ಸಹಿ ಹಾಕಿರುವ ಖಾಲಿ ಚೆಕ್ ಗಳನ್ನು ಇಟ್ಟಿರುತ್ತೇನೆ. ಸದರಿ ವಿಚಾರ ನಮ್ಮ ಕುಟುಂಬದವರಿಗೆ ತಿಳಿದಿರುತ್ತದೆ. ನಮ್ಮ ಮನೆಯಲ್ಲಿಯೇ ನನ್ನ ತಮ್ಮ ಸೈಯದ್ ಯಾನೆ ಸೈದು ಎನ್ನುವವರು 5-6 ವರ್ಷಗಳ ಹಿಂದಿನವರೆಗೂ ವಾಸ ಮಾಡಿಕೊಂಡಿದ್ದರು. ನನ್ನ ತಮ್ಮ ಸೈಯದ್ ಪಿರ್ಯಾದುದಾರರ ಬಳಿ ಚೀಟಿ ವ್ಯವಹಾರ ಮಾಡಿಕೊಂಡಿರುತ್ತಾರೆ. ಸದರಿ ಚೀಟಿಗೆ ಸಂಬಂಧಪಟ್ಟಂತೆ ಭದ್ರತೆಗಾಗಿ ನನ್ನ ತಮ್ಮ ನನ್ನ ಮನೆಯಲ್ಲಿ ಇಟ್ಟಿದ್ದ ಸಹಿ ಮಾಡಿದ ಖಾಲಿ ಚೆಕ್ ಅನ್ನು ತೆಗೆದುಕೊಂಡು ಹೋಗಿ ಪಿರ್ಯಾದುದಾರರಿಗೆ ನೀಡಿರುತ್ತಾರೆ. ಸದರಿ ವಿಚಾರ ನನಗೆ ನನ್ನ ತಮ್ಮ ಆ ಸಮಯದಲ್ಲಿ ತಿಳಿಸಿರುವುದಿಲ್ಲ. ನಂತರದಲ್ಲಿ ನನಗೆ ಈ ಪ್ರಕರಣದ ನೋಟೀಸ್ ತಲುಪಿದಾಗ ಅದನ್ನು ತೆಗೆದು ನೋಡಲಾಗಿ ನನಗೆ ಸೇರಿದ ಒಂದು ಚೆಕ್ ಅನ್ನು ಪಿರ್ಯಾದುದಾರರು ಬ್ಯಾಂಕ್ ಗೆ ಹಾಜರುಪಡಿಸಿರುವುದು ನನಗೆ ತಿಳಿದು ಬಂದಿರುತ್ತದೆ. ಈ ಬಗ್ಗೆ ನಾನು ಹೆಚ್ಚುವರಿ ವಿಚಾರ ಮಾಡಲಾಗಿ ಸದರಿ ಚೆಕ್ ಅನ್ನು ಮೇಲೆ ಹೇಳಿದಂತೆ ನನ್ನ ತಮ್ಮ ನನಗೆ ತಿಳಿಸದೇ ಪಿರ್ಯಾದುದಾರರ ಜೊತೆ ನಡೆಸಿದ್ದ ಚೀಟಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನೀಡಿರುತ್ತಾನೆ ಎಂದು ತಿಳಿದು ಬಂದಿದ್ದು, ಆತನನ್ನು ನಾನು ಹೆಚ್ಚಾಗಿ ವಿಚಾರಿಸಲಾಗಿ ಆತನು ಪಿರ್ಯಾದುದಾರರಿಗೆ ಸಂಪೂರ್ಣ ಹಣ ನೀಡಿದ್ದರೂ ಸಹ ಭದ್ರತೆಗಾಗಿ ಪಡೆದಿದ್ದ ನನ್ನ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಅದನ್ನು ಬ್ಯಾಂಕ್ ಗೆ ಹಾಜರುಪಡಿಸಿ ಈ ಸುಳ್ಳು ಪ್ರಕರಣವನ್ನು ನನ್ನ ವಿರುದ್ದ ಹೂಡಿರುತ್ತಾರೆ ಎಂದು ನಾನು

ತಿಳಿದುಕೊಂಡಿರುತ್ತೇನೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ನನಗೆ ನೋಟೀಸ್ ಜಾರಿಯಾದ ನಂತರ ನಾನು ನನ್ನ ವಕೀಲರ ಮುಖಾಂತರ ಪಿರ್ಯಾದುದಾರರಿಗೆ ಮರು ಉತ್ತರ ನೀಡಿರುತ್ತೇನೆ ಮತ್ತು ಪಿರ್ಯಾದುದಾರರನ್ನು ಸಹ ಭೇಟಿ ಮಾಡಿ ಸತ್ಯಾಂಶಗಳನ್ನು ತಿಳಿಸಿರುತ್ತೇನೆ ಹಾಗೂ ಪಿರ್ಯಾದುದಾರರು ನನಗೆ ಹಣವನ್ನು ನನ್ನ ತಮ್ಮ ನೀಡಬೇಕೆಂದು ತಿಳಿಸಿದ್ದು ನನ್ನ ವಿರುದ್ದ ಮುಂದಿನ ಕ್ರಮ ತೆಗೆದುಕೊಳ್ಳವುದಿಲ್ಲ ಎಂದು ಭರವಸೆ ನೀಡಿದ್ದರು. ಪಿರ್ಯಾದುದಾರರಿಗೆ ಅವರು ಹೇಳುತ್ತಿರುವಷ್ಟು ಹಣ ನೀಡುವಷ್ಟು ಸಾಮರ್ಥ್ಯ ಸಹ ಇರುವುದಿಲ್ಲ. ಪಿರ್ಯಾದುದಾರರು ಈ ಪ್ರಕರಣನ್ನು ಸುಳ್ಳಾಗಿ ದಾಖಲಿಸಿರುವ ಕಾರಣ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**:: ಪಾಟೀಸವಾಲು :: ಪಿರ್ಯಾದುದಾರರ ಪರ ವಕೀಲರಿಂದ ::**

**(ಪಾಟೀ ಸವಾಲಿಗೆ ಪಿರ್ಯಾದುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-
ಪ್ರ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ತರೀಕೆರೆ.

ಸಾಕ್ಷಿಯ ಸಹಿ::